

# ಮೈಲುದ್ದದ ಚೈನು

ಚೂಯಿಂಗ್ ಗಮ್ ಬಾಯಿಗೆ ಹಾಕಿಕೊಂಡ ಬಳಿಕ ಅದರ ಹೊರ ಹೊದಿಕೆಯನ್ನು ಅಲ್ಲೇ ಎಸೆದು ಬಿಡುವ ನಮಗೆ ಅಚ್ಚರಿ ತರುವ ವಿಷಯವಿದು. ಚೂಯಿಂಗ್ ಗಮ್‌ನ ಬೇರೆ ಬೇರೆ ಬಣ್ಣಗಳ ಹೊದಿಕೆಗಳನ್ನು ಮಡಚಿ ನೀಟಾಗಿ ಜೋಡಿಸಿ ಈ ಭಾರೀ ಚೈನನ್ನು ತಯಾರಿಸಲಾಗಿದೆ. ವರ್ಜೀನಿಯಾದ ಗಾರಿ ದುಸ್ಚಿ ಎಂಬಾತ ಇದರ ಸೃಷ್ಟಿಕರ್ತ. ಜಗತ್ತಿನಲ್ಲಿ ಇಷ್ಟುದ್ದದ ಇಂಥ ಚೈನು ತಯಾರಿಸಿದ್ದು ಅವನೊಬ್ಬನೇ ಎಂದು ಗಿನ್ನೆಸ್ ದಾಖಲೆ ಅವನಿಗೆ ಮನ್ನಣೆ ನೀಡಿದೆ.

ಗಾರಿ ದುಸ್ಚಿಗೆ ಹಲವು ಹವ್ಯಾಸಗಳಿವೆ. ಆತ 1965ರಲ್ಲಿ ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಿ ಈ ಚೈನಿನ ಜೋಡಣೆ ಆರಂಭಿಸಿದ. 1992ರಲ್ಲಿ ನಯಾಗರಾಗೆ ಭೇಟಿ ನೀಡಿದಾಗ ಅಲ್ಲಿರುವ ವಸ್ತು ಸಂಗ್ರಹಾಲಯದಲ್ಲಿ ಯಾರೋ ಮಾಡಿದ್ದ ಇದೇ ವಿಧದ ಚೈನನ್ನು ನೋಡಿದ್ದ. ತಾನು ಇದರಲ್ಲಿ ದಾಖಲೆ ಮಾಡಬೇಕೆಂಬ ಬಯಕೆ ಬೆಳೆಯಿತು. ಅವನಿಗೆ ಚೂಯಿಂಗ್ ಗಮ್ ಜಗಿಯುವ ಹವ್ಯಾಸವಿರಲಿಲ್ಲ. ಆದರೆ ವಿಶ್ವದಾದ್ಯಂತ ಜನರಿಗೆ ಮನವಿ ಮಾಡಿ ಚೂಯಿಂಗ್ ಗಮ್ ತಿಂದ ಬಳಿಕ ಅದರ ಕವರ್ ಅನ್ನು ತನಗೆ ಕಳುಹಿಸುವಂತೆ ಕೇಳಿಕೊಂಡ. ಸಾವಿರಾರು ಜನರು ಅವನ ಕೋರಿಕೆಗೆ ಸ್ಪಂದಿಸಿದರು. ನೆದರ್ಲೆಂಡಿನ ಶಾಲಾ ಮಕ್ಕಳು ಚೂಯಿಂಗ್ ಗಮ್ ಕವರ್ ಕಳುಹಿಸಿದರು. ಈ ಮಧ್ಯೆ ಉತ್ತರ ಅಮೆರಿಕ ಸರಕಾರ ಚೂಯಿಂಗ್ ಗಮ್‌ಗೆ ಕವರ್ ಹಾಕುವುದನ್ನು ನಿಷೇಧಿಸಿದ್ದು ಅವನಿಗೆ ತೊಡಕು ಉಂಟು ಮಾಡಿತು.

ಆದರೂ ಗಾರಿ ಗುರಿ ಮುಟ್ಟಿದ್ದಾನೆ. 61 ಸಾವಿರದ 988 ಅಡಿ ಉದ್ದದ ಚೈನು ಸಿದ್ಧವಾಗಿದೆ. ಇದರ ಉದ್ದ 11.7 ಮೈಲುಗಳು. ಈಗಾಗಲೇ 24 ಸಾವಿರ ತಾಸುಗಳ ಕೆಲಸವಾಗಿದೆ. ಮುಂದೆ 26 ಮೈಲುದ್ದ ತಲಪುತ್ತಾನಂತೆ!

■ ಪ.ರಾಮಕೃಷ್ಣ ಶಾಸ್ತ್ರಿ